"ಬೇರೆ ಉಪಾಯ ಇದೆಯೇ?"

"ಆದರೂ..."

"ನೀನು ವಿಷಯ ತಿಳಿಸಿದೆ ಎಂದುಕೋ. ಆಮೇಲೆ ಅವನು 'ಇಲ್ಲ'ವೆಂದು ಹೇಳಿ, ಈ ಸುದ್ದಿಯನ್ನು ಗಾಳಿಗೆ ಬಿಡಬಹುದಲ್ಲ?"

ಕುಂದಾ ಮೌನವಾದಳು. ಅವಳಿಗೆ ಅನಿಸಿತು ತಾನು ಕೋಗಿಲೆಯಾಗಿದ್ದೇನೆ. ಮೊಟ್ಟೆ ಇಡಲು ಕಾಗೆಯ ಗೂಡನ್ನು ಹುಡುಕುತ್ತಿದ್ದೇನೆ. ಕೋಗಿಲೆಯ ಒಳ್ಳೆಯತನವೇನೆಂದರೆ ಅದು ಗೂಡು ಕಟ್ಟುವುದಿಲ್ಲ, ಆದರೆ ಕಾಗೆ ಕಟ್ಟಿದ ಗೂಡನ್ನು ನಾಶ ಮಾಡುವುದಿಲ್ಲ. ವಸಂತ ಋತುವಿನಲ್ಲಿ 'ಕುಹೂ ಕುಹೂ' ಎನ್ನುತ್ತಾ ಇರುವುದು ಕೋಗಿಲೆಯ ಧರ್ಮ. ಅಲ್ಲದೆ ಅದು ಮೊಟ್ಟೆಯನ್ನು ಯಾವುದೇ ಗೂಡಿಗೆ ದಾಟಿಸಿದರೂ ಆ ಮರಿ ಹುಟ್ಟಿದೊಡನೆ ಹೇಳುವುದು 'ಕುಹೂ ಕುಹೂ' ಎಂದೇ. ಆ ಗೂಡು ಯಾರದ್ದೇ ಇರಲಿ. ಹಾಗಿದ್ದರೂ, ಧ್ವನಿ ಒಡೆಯುವವರೆಗೆ ಆ ಮರಿ ಕಾಗೆಯದು ಅಲ್ಲ ಎನ್ನುವಂತಿಲ್ಲ. ಇನ್ನು ಕಾಗೆ ಮತ್ತು ಕೋಗಿಲೆಯನ್ನು ಹೊರತುಪಡಿಸಿ ಆ ಮೊಟ್ಟೆ ಕಾಗೆಯದ್ದಲ್ಲದಿದ್ದರೂ, ಅದು ಕೋಗಿಲೆಯದು ಎಂದು ಯಾರಿಗೂ ಗೊತ್ತಿರುವುದಿಲ್ಲ.

ಇದರರ್ಥ ಮಗುವಿಗೆ ಜನ್ಮ ನೀಡುವುದಿದ್ದರೆ ಕುಂದಾ ಕಾಗೆಯನ್ನು ಹುಡುಕಲೇ ಬೇಕು. ಅದನ್ನು ವಂಚಿಸುವುದು ಕೋಗಿಲೆಯ ಅನಿವಾರ್ಯತೆಯಾಗಿದೆ.

ದೇಸಾಯಿಯ ನೋಟದಲ್ಲಿ ತನ್ನ ಮೇಲಿನ ಪ್ರೀತಿ ಈಗಲೂ ಕುಂದಾಗೆ ಕಾಣಿಸುತ್ತಿದೆ. ವಿಚಾರಿಸಿದರೆ ಅವನು ಇಲ್ಲ ಎಂದು ಹೇಳಲಾರ. ಆದರೆ ತನ್ನ ಮನಸ್ಸು ಸಿದ್ಧವಾಗಿದೆಯೇ ಎನ್ನುವುದು ಅವಳಿಗೆ ಗೊತ್ತಿಲ್ಲ.

ಕೋಗಿಲೆ ಸ್ವಾರ್ಥಿ. ಅದಕ್ಕೆ 'ಕುಹೂ'ವಿನ ಆಚೆ ಏನು ಕಾಣುವುದಿಲ್ಲ. ಕುಂದಾಗೆ ಅನಿಸುತ್ತದೆ ನಾನೂ ಸ್ವಾರ್ಥಿಯೇ. ನನಗೆ ಕವಳೆಕಾರ ಮರ; ಬಳ್ಳಿಗೆ ಆಸರೆ ನೀಡುವ ಮರ. ದೇಸಾಯಿ ಸದ್ಯಕ್ಕೆ ನನ್ನ ಕಾಗೆ.

ಇದರಿಂದ ಹೊರ ಬರುವ ದಾರಿಯನ್ನು ಸ್ವತಃ ನಾನೇ ಕಂಡುಕೊಳ್ಳಬೇಕು ಎಂದು ಕುಂದಾ ನಿರ್ಧರಿಸಿದಳು. ಕವಳೆಕಾರ ತನ್ನ ಸಂಸಾರವನ್ನು ನೋಡಿಕೊಂಡು ಇರಲಿ. ಯಾವುದೋ ಹಸಿದ ಕ್ಷಣದಲ್ಲಿ ನಾವಿಬ್ಬರು ಜೊತೆಗೂಡಿದೆವು. ಆದರೆ ಈಗ ನಮ್ಮ ನಮ್ಮ ದಾರಿಗಳು ಬೇರೆಯಾಗಬೇಕಾಗಿದೆ. ಪರಸ್ಪರ ಅರ್ಥ ಮಾಡಿಕೊಂಡು ಉತ್ತಮ ರೀತಿಯಿಂದ ಕವಳೆಕಾರನ ಅಧ್ಯಾಯ ಮುಗಿಸಬೇಕಾಗಿದೆ. ಇನ್ನು ಮುಂದೆ ಅವನು ಬರೀ ನನ್ನ ಬಾಸ್, ಮರವಲ್ಲ.

ಅದೇ ರೀತಿ ಅವಳು ಕವಳೆಕಾರನಲ್ಲಿ ಹೇಳಿಯೂ ಬಿಟ್ಟಳು, "ನೀವು ಚಿಂತೆ ಮಾಡಬೇಡಿ. ಏನು ಮಾಡಬಹುದೆಂದು ನಾನು ನೋಡುತ್ತೇನೆ." ಮರದ ಆಧಾರವನ್ನು ಬಿಟ್ಟು ಬಳ್ಳಿ ಸ್ವತಂತ್ರವಾಗಿ ಬದಿಗೆ ಸರಿಯಿತು.

ಆ ಭಾನುವಾರ ಮನಸ್ಸಿನಲ್ಲಿ ಆಲೋಚನೆಗಳನ್ನು ತುಂಬಿಕೊಂಡು ಕುಂದಾ ಸಮುದ್ರವನ್ನು ಭೇಟಿಯಾಗಲು ಹೋದಳು. ಒಣಮರಳಿನ ಮೇಲೆ ಹೆಜ್ಜೆ ಇಡುತ್ತಾ ನಡೆದು ಹೋದಳು. ಮಗ್ಗಲಲ್ಲಿ ದೀಪಗಳ ಹೊಳೆವ ಮಾಲೆಗಳು ಮುಂದೆ ಮುಂದೆ ಸಾಗುತ್ತಿದ್ದವು. ಇಳಿಸಂಜೆಯು ತನ್ನ ಹಸಿರು, ಕೆಂಪು, ನೀಲಿ, ಹಳದಿ ಬಣ್ಣದ ಉರಿನಾಲಿಗೆಗಳಿಂದ ಸಮುದ್ರವನ್ನು ಪ್ರಚೋದಿಸಲು ಹವಣಿಸುತ್ತಿತ್ತು. ಆ ನಾಲಿಗೆಗಳು ಸಮುದ್ರಕ್ಕೆ ಬೆಂಕಿ ಹತ್ತಿಸಲು ಪ್ರಯತ್ನಿಸುತ್ತಿರುವಂತೆ ಭಾಸವಾಗುತ್ತಿತು.

ನೋಡುತ್ತಿದ್ದಂತೆ ಸಮುದ್ರ ಹೊತ್ತಿಕೊಂಡಿತು... ಬುಳುಬುಳು ಸದ್ದಿನಿಂದ